INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 15 | ISSUE - 5 | JUNE – 2025

# 'ಸಿರಿಸಂಪಿಗೆ' ಮತ್ತು 'ನಾಗಮಂಡಲ' ನಾಟಕಗಳಲ್ಲಿನ ತಾತ್ವಿಕತೆ

ಡಾ. ಶಿವಕೀರ್ತಿ ವಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ),ಮಂಡ್ಯ.

**ಸಾರಾಂಶ (Abstract) :**

ಚಂದ್ರಶೇಖರ ಕಂಬಾರರ 'ಸಿರಿಸಂಪಿಗೆ' ಮತ್ತು ಗಿರೀಶ ಕಾರ್ನಾಡರ 'ನಾಗಮಂಡಲ' ನಾಟಕಗಳು ಪರಿಪೂರ್ಣತೆಯನ್ನು ಸಾಧಿಸುವಲ್ಲಿ ಹಾತೊರೆಯುವ ಮನಃಸ್ಥಿತಿಗಳನ್ನು ಮುಖ್ಯವಾಗಿಟ್ಟುಕೊಂಡು ಸಾಗುವ ವಸ್ತು ವಿಷಯಗಳಾಗಿವೆ. ಸಿರಿಸಂಪಿಗೆಯ ಶಿವನಾಗದೇವನು ತನ್ನೊಳಗಿನ ವ್ಯಕ್ತಿತ್ವವನ್ನೇ ಕಾಮಿಸುತ್ತಾ ದೀಪದ ಮೊಲ್ಲೆಯನ್ನು ವರಿಸುವ ವ್ಯರ್ಥ ಪ್ರಯತ್ನ ಮಾಡುತ್ತಾನೆ. ನಾಗಮಂಡಲದ ಅಪ್ಪಣ್ಣ ಮತ್ತು ನಾಗಪ್ಪರೂ ಸಹ ಇದೇ ಬಗೆಯ ಸೀಳು ವ್ಯಕ್ತಿತ್ವದವರು. ತಮ್ಮೊಳಗೇ ಇರುವ ಎರಡು ವಿರುದ್ಧ ಮನಃಸ್ಥಿತಿಗಳ ಅನಾವರಣವನ್ನು ನಾಟಕಗಳು ಓದುಗರ ಮುಂದೆ ತೆರೆದಿಡುತ್ತವೆ. ಇಬ್ಬರೂ ಲೇಖಕರು ದೇಹ ಮತ್ತು ಮನಸ್ಸುಗಳಂತಹ ಅತ್ಯಂತ ಸಂಕೀರ್ಣ ವಸ್ತುವನ್ನು ತಮ್ಮ ನಾಟಕದ ಮೂಲ ವಿಷಯವಾಗಿಸಿಕೊಂಡು ನಿರೂಪಿಸುತ್ತಾ ಸಾಗಿದ್ದಾರೆ.




**ಮುಖ್ಯ ಪದಗಳು (Key Words) :**
**ಅರ್ಧನಾರೀಶ್ವರ, ಅನಿಮಾ, ನಿರಾಕಾರ, ಪರಿಪೂರ್ಣತೆ, ಮಾಯಾಜಿಂಕೆ, ಲೌಕಿಕ, ಹಪಾಹಪಿಕೆ,**

ಚಂದ್ರಶೇಖರ ಕಂಬಾರರು ಮತ್ತು ಗಿರೀಶ ಕಾರ್ನಾಡರು ಸಹಜವಾಗಿಯೇ ಮನುಷ್ಯನ ಅಸ್ತಿತ್ವದ ಹುಡುಕಾಟವನ್ನು ಕುರಿತು ಅತ್ಯಂತ ಮಾರ್ಮಿಕವಾಗಿ ತಮ್ಮ ನಾಟಕಗಳಲ್ಲಿ ಅನಾವರಣ ಮಾಡುವುದನ್ನು ನಾವು ಕಾಣಬಹುದು. ಕಂಬಾರರ 'ಸಿರಿಸಂಪಿಗೆ' ಮತ್ತು ಕಾರ್ನಾಡರ 'ನಾಗಮಂಡಲ' – ಈ ಎರಡೂ ನಾಟಕಗಳು ಕನ್ನಡ ಸಾಹಿತ್ಯದ ನವ್ಯ ಕಾಲಘಟ್ಟದಲ್ಲಿ ಪ್ರಕಟಗೊಂಡಂತಹ ನಾಟಕಗಳಾಗಿವೆ. ಈ ಎರಡೂ ನಾಟಕಗಳಿಗೆ ಕಾರ್ನಾಡರು ಮತ್ತು ಕಂಬಾರರಿಬ್ಬರಿಗೂ ಗುರುಗಳಾದ ಎ.ಕೆ.ರಾಮಾನುಜನ್ ಅವರು ಹೇಳಿರುವ ಒಂದು ಜನಪದ ಕಥೆಯು ಮೂಲ ಸಾಮಗ್ರಿಯನ್ನು ಒದಗಿಸಿದೆ ಎಂಬುದಾಗಿ ಕೀರ್ತಿನಾಥ ಕುರ್ತಕೋಟಿ ಅಭಿಪ್ರಾಯ ಪಡುತ್ತಾರೆ. ಮನುಷ್ಯನು ತನ್ನ ಪರಿಪೂರ್ಣತೆಯ ಕಡೆಗೆ ಸಾಗುತ್ತಾ ಬದುಕನ್ನು ವೈಶಿಷ್ಟ್ಯಪೂರ್ಣಗೊಳಿಸಿಕೊಳ್ಳಲು ಬಯಸುತ್ತಾನೆ. ಹಾಗೆಯೇ ತನ್ನ ಬದುಕಿಗೆ ಪ್ರವೇಶಿಸುವ ಪಾತ್ರಗಳು ಸಹ ಪರಿಪೂರ್ಣತೆಯನ್ನು ಹೊಂದಿರಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತಾನೆ. ಅಂತೆಯೇ 'ಸಿರಿಸಂಪಿಗೆ'ಯ ಶಿವನಾಗದೇವನೂ ಸಹ ಇದೇ ಮನಸ್ಥಿತಿಯ ರಾಜಕುಮಾರ. ತನಗೆ ಪರಿಪೂರ್ಣಳಾದ ಸ್ತ್ರೀಯು ಪತ್ನಿಯಾಗಬೇಕೆಂದು ಬಯಸಿ ತನ್ನ ಕನಸಿನಲ್ಲಿ ಕಂಡಂತಹ 'ದೀಪದ ಮೊಲ್ಲೆಯ ಚೆಲುವೆ'ಯನ್ನು ಹುಡುಕುತ್ತಾ, ತನ್ನಲ್ಲಿಯೇ ಲೀನವಾದ ಆಕೆಯನ್ನು ಪಡೆಯುವಿಕೆಗಾಗಿ ತನ್ನನ್ನು ತಾನೇ ಸೀಳಿಕೊಳ್ಳುತ್ತಾನೆ. ಇದರ ಪ್ರತಿಫಲವಾಗಿ ಸೀಳಿ ಇಬ್ಭಾಗಗೊಂಡ ದೇಹದಿಂದ ಉದ್ಭವಿಸಿದ ಎರಡು ಜೀವಿಗಳಲ್ಲಿ ಒಂದು: ಸ್ಫುರದ್ರೂಪಿಯಾದ ರಾಜಕುಮಾರ ಶಿವನಾಗದೇವ; ಮತ್ತೊಂದು ಕಾಳಿಂಗ ಸರ್ಪ. ಇಲ್ಲಿಂದ ಮುಂದುವರೆದು ನಾಟಕದ ಕೊನೆಯವರೆಗೂ ಸಹ ದೇಹ ಮತ್ತು ಆತ್ಮಗಳ ಪ್ರತ್ಯೇಕತೆಯನ್ನು ಅಥವಾ ಪ್ರತ್ಯೇಕ ಅಸ್ತಿತ್ವವನ್ನು ಅರಿಯದಿದ್ದ ಶಿವನಾಗದೇವನು ತನ್ನ ಬದುಕಿನ ವೈಚಿತ್ರ್ಯಗಳಿಂದ ಪ್ರತ್ಯೇಕತೆಯನ್ನು ಒಪ್ಪಿಕೊಳ್ಳುತ್ತಾನೆ. ದೇಹ ಮತ್ತು ಮನಸ್ಸುಗಳ ನಡುವಿನ ಅಸ್ಮಿತೆಯ ಸಂಘರ್ಷ, ದೇಹ ಮತ್ತು ಆತ್ಮಗಳನ್ನು ಕುರಿತಾದ ಚರ್ಚೆ. ಜೊತೆಗೆ ಇವೆಲ್ಲವೂ ಒಂದನ್ನೊಂದು ನಿಕಟವಾಗಿ ಈ ನಾಟಕಗಳಲ್ಲಿ ಎಣೆದುಕೊಂಡಿದ್ದು ಒಂದಿಲ್ಲದೆ ಮತ್ತೊಂದರ ಸಾರ್ಥಕತೆ ಸಾಧ್ಯವಿಲ್ಲ ಎಂಬ ಪ್ರಮುಖ ಧೋರಣೆಯನ್ನು ಇಲ್ಲಿ ಸಾಧಿಸುವ ಪ್ರಯತ್ನವಿದೆ.

ಈ ಎರಡೂ ನಾಟಕಗಳಲ್ಲಿ ಸ್ತ್ರೀ ಪಾತ್ರಗಳ ಬಗೆಗಿನ ಧೋರಣೆಯು ಒಂದೇ ಬಗೆಯದಾಗಿದೆ. ಇಲ್ಲಿ ಕಂಡುಬರುವ ಹಿರಿಯ ಸ್ತ್ರೀ ಪಾತ್ರಗಳಿಗೆ ಅನುಭವಿ ಜೀವವೆಂಬ ಗೌರವವು ದೊರೆಯುತ್ತದೆ. ಆದರೆ ಕಿರಿಯ ಸ್ತ್ರೀ ಪಾತ್ರಗಳಿಗೆ ಭಯ, ಅಸಹಾಯಕತೆ, ದ್ವಂದ್ವ,

ಮಾನಸಿಕ ಹಿಂಸೆ – ಇಂತಹ ವೈಚಿತ್ರ್ಯಗಳೇ ಎದುರಾಗುತ್ತವೆ. ಈ ಎರಡೂ ನಾಟಕಗಳಲ್ಲಿ ಕುರುಡವ್ವ, ಮಾಯಾವತಿ – ಇವರಿಗೆ ಸಿಗುವ ಮನ್ನಣೆಯು ಕಮಲ, ಸಿರಿಸಂಪಿಗೆ, ರಾಣಿ ಈ ಪಾತ್ರಗಳಿಗೆ ಸಿಗುವುದಿಲ್ಲ. ಅರ್ಥಾತ್ ನಮ್ಮ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡೇ ನಮ್ಮ ಭವಿಷ್ಯದ ಬದುಕನ್ನು ರೂಪಿಸಿಕೊಳ್ಳಬೇಕೆಂಬುದು ಲೇಖಕರ ಆಶಯವಾಗಿದೆ. ಈ ಎರಡೂ ನಾಟಕಗಳಲ್ಲಿ ಬರುವ ಮಾತನಾಡುವ ಜ್ಯೋತಿಗಳು, ದೀಪದ ಮೊಲ್ಲೆ– ಇವು ಸಾಂಕೇತಿಕವಾಗಿದ್ದು, ಸುಪ್ತಮನಸ್ಸಿನ ಒಳಗಿರುವ ಅರಿವೆಂಬ ಬೆಳಕನ್ನು ಪ್ರತಿನಿಧಿಸುತ್ತವೆ. ಜಗತ್ತಿನ ಪ್ರತಿಯೊಂದು ಜೀವಿಯಲ್ಲೂ ಸಹ ಎಲ್ಲಾ ಬಗೆಯ ಸಂವೇದನೆ ಇದ್ದೇ ಇರುತ್ತದೆ. ಜೈವಿಕವಾಗಿ ಹೊರನೋಟಕ್ಕೆ ಮಾತ್ರ ಗಂಡು–ಹೆಣ್ಣು ಎಂಬುದಾಗಿ ನಿರ್ಧರಿಸುತ್ತೇವೆ. ಮನೋವಿಜ್ಞಾನಿಯಾದ ಸಿ.ಜಿ. ಯೂಂಗ್‌ನು ಗಂಡಿನಲ್ಲಿರುವ ಹೆಣ್ಣಿನ ಗುಣಗಳನ್ನು “ಅನಿಮಾ” ಎಂದು ಕರೆಯುತ್ತಾನೆ. ಕಂಬಾರರು ಚಿತ್ರಿಸಿದ ಶಿವನಾಗದೇವನಲ್ಲಿ ಈ ಅಂಶವನ್ನು ಕಾಣಬಹುದಾಗಿದೆ. ಶಿವನಾಗದೇವನು ತನ್ನೊಳಗೆ ಇದ್ದಂತಹ ಕಾಳಿಂಗ ಸ್ವರೂಪವು ಆತನ ಮನೋವಿಕಲತೆಯನ್ನು ತೋರಿಸುತ್ತದೆ. ಶಿವನಾಗದೇವ ಮತ್ತು ಅಪ್ಪಣ್ಣ ಇಬ್ಬರೂ ಈ ದ್ವಂದ್ವದಲ್ಲಿಯೇ ಮುಳುಗಿ ತೊಳಲಾಡುತ್ತಾರೆ. ಈ ಎರಡೂ ನಾಟಕಗಳಲ್ಲಿ ಸರ್ಪವು ಕಾಮದ ಸಂಕೇತವಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಲೈಂಗಿಕತೆಯ ಸುತ್ತಲೂ ಇರಬೇಕಾದ ನೈತಿಕತೆಯ ಪದರವನ್ನು ಓದುಗರೆದುರು ಚರ್ಚೆಗೆ ಒಳಗು ಮಾಡುವುದೇ ಈ ನಾಟಕಗಳ ಮತ್ತೊಂದು ಪ್ರಮುಖ ಅಂಶ ಎನ್ನಬಹುದು.

ಈ ನಾಟಕಗಳಲ್ಲಿ ಕಂಡುಬರುವ ಭ್ರಮಾತ್ಮಕವಾದ ಕಲ್ಪನೆಗಳು, ಸಂಕೀರ್ಣ ಸಂಬಂಧಗಳ ಅರಿವು, ಮನುಷ್ಯ ಸಂಬಂಧಗಳ ಸಾಂಪ್ರದಾಯಿಕ ಬೇರುಗಳನ್ನು ಬಲಗೊಳಿಸುತ್ತಾ, ಅವುಗಳಿಂದ ಆಧುನಿಕ ಚೈತನ್ಯದ ಫಲ ಪಡೆಯುವ ಬಯಕೆಯು ಅಡಗಿದೆ. ‘ಸಿರಿಸಂಪಿಗೆ’ಯಲ್ಲಿ ಅವಳಿ–ಜವಳಿ ಪಾತ್ರಗಳು ಮುಖ್ಯ ಪಾತ್ರಗಳಿಗೆ ಪೂರಕವಾಗಿ ಬಂದಿದ್ದರೂ, ಲಘು ಹಾಸ್ಯವನ್ನು ಒಳಗೊಂಡು ಮುಖ್ಯ ಪಾತ್ರಗಳಷ್ಟೇ ಪ್ರಮಾಣದಲ್ಲಿ ಬದುಕನ್ನು ಸಮರ್ಥವಾಗಿ ಎದುರಿಸುವ ಸ್ಥಿತಿಗೆ ಒಳಗಾಗುತ್ತವೆ. ಅವಳಿ–ಜವಳಿಗಳಿಗೆ ಎದುರಾಗುವ ಸ್ಥಿತಿಯನ್ನು ಮುಖ್ಯ ಪಾತ್ರಗಳ ಅನುಭವಕ್ಕೆ ಅನಂತರ ಕಾಣಿಸುವ ಮುನ್ಸೂಚನೆಯಂತೆ ಚಿತ್ರಿಸಲಾಗಿದೆ. ಕಾರ್ನಾಡರ ನಾಗಮಂಡಲದ ಅಪ್ಪಣ್ಣ, ನಾಗಪ್ಪರಂತೆ ಕಂಬಾರರ ಸಿರಿಸಂಪಿಗೆಯಲ್ಲಿ ಅವಳಿ–ಜವಳಿ ಪಾತ್ರಗಳು ನಿರೂಪಿತವಾಗಿವೆ. “ಲೌಕಿಕ ಬದುಕಿನಲ್ಲಿ ಅಪನಂಬಿಕೆ ಮೂಡಿದರೆ ಅದು ಅಲೌಕಿಕತೆಯನ್ನು ಪ್ರಿಯಗೊಳಿಸುತ್ತದೆ” ಎಂಬ ಅಂಶವನ್ನು ಈ ನಾಟಕಗಳ ಓದುವಿಕೆಯಿಂದ ತಿಳಿಯಬಹುದು. ಮನುಷ್ಯನು ಸಹಜವಾಗಿ ತನ್ನೊಳಗಿನ ಪರಿಪೂರ್ಣತೆ ಸಾಧಿತಗೊಳಿಸಿಕೊಳ್ಳದೆಯೇ ತನ್ನ ಹೊರಗೆ ಕಾಣುವ ಅಪರಿಪೂರ್ಣತೆಯನ್ನು ಪ್ರಶ್ನಿಸುವುದು ಸೂಕ್ತವಲ್ಲ ಎಂದು ಈ ನಾಟಕಗಳು ಸೂಚಿಸುತ್ತವೆ. ತಾತ್ವಿಕತೆಯ ದೃಷ್ಟಿಯಿಂದ ಈ ನಾಟಕಗಳ ನಾಯಕ ಪಾತ್ರಗಳು ಬಹಳ ಮುಖ್ಯ ಎನಿಸುತ್ತವೆ. ಇಲ್ಲಿ ಚಿತ್ರಣಗೊಂಡಿರುವ ಪುರುಷ ಯಜಮಾನಿಕೆ, ಸ್ತ್ರೀ ಅಸಹಾಯಕತೆ, ಆಕಸ್ಮಿಕಗಳು – ಇವೆಲ್ಲವುಗಳ ಪರಿಣಾಮ ಏನಾಗುತ್ತದೆಂದು ನಾಟಕ ತಿಳಿಸುತ್ತದೆ, ಜನಪದ ಆಚರಣೆಗಳು ಈ ನಾಟಕಗಳಲ್ಲಿ ಜೀವಂತಿಕೆಯಿಂದ ಮೂಡಿ ಬಂದಿವೆ.

ನಾಗಮಂಡಲ ನಾಟಕದಲ್ಲಿ "ರೀ.....ಈ........ರಾತ್ರೆ......ಹೊತ್ತು....ನನಗೊಬ್ಬಳಿಗೇ ಮನೆಯಲ್ಲಿ....... ಹೆದರಿಕೆ" ಎಂದು ರಾಣಿ ಹೇಳುವಾಗ ಅಪ್ಪಣ್ಣನು ತೋರುವ ಪ್ರತಿಕ್ರಿಯೆಯು "ಹೆದರಲಿಕ್ಕೆ ಏನಾಗಿದೆ? ನಿನ್ನ ಪಾಡಿಗೆ ನೀನು ಬಿದ್ದುಕೊಂಡಿರು ನೋಡು..... ಸುಮ್ಮನೆ ಯಾಕೆ ಏನು ಅಂತ ಕೇಳಿ ತಲೆಕೆಡಿಸಬೇಡ, ಹೇಳಿದಷ್ಟು ಮಾಡು ತಿಳೀತೇನು?" ಎಂದು ಉದಾಸೀನದ ಉತ್ತರ ನೀಡುತ್ತಾನೆ. ಪುರುಷ ಯಜಮಾನಿಕೆಗೆ ಇಲ್ಲಿ ಸ್ತ್ರೀ ಅಸಹಾಯಕತೆಯು ಉತ್ತರವಾಗಿದೆ ಎನ್ನಬಹುದಾದರೂ ಒಂದು ಮೌನ ಪ್ರತಿಭಟನೆಯನ್ನಂತೂ ಇಲ್ಲಿ ಕಾಣಬಹುದು. ‘ಸಿರಿಸಂಪಿಗೆ’ಯಲ್ಲಿ ಇದಕ್ಕೆ ಹೊರತಾದ ಸ್ಥಿತಿಯೇನೂ ಇಲ್ಲ. ಆದರೆ ಕೊನೆಯ ಸನ್ನಿವೇಶಗಳಲ್ಲಿ ಸ್ತ್ರೀ ಪಾತ್ರಗಳ ಪ್ರತಿಭಟನೆಯು ಸಮರ್ಥವಾಗಿ ಪ್ರಕಟಗೊಳ್ಳುವುದನ್ನು ಕಾಣಬಹುದು.

ಈ ನಾಟಕಗಳಲ್ಲಿ ಸಂಭಾಷಣೆಯಲ್ಲಿಯೇ ಪಾತ್ರ ವಿಶ್ಲೇಷಣೆಯೂ ಸಹ ತನಗೆ ತಾನೆ ಜರುಗುತ್ತದೆ. “ಅವ್ವ ಆ ಅಪ್ಪಣ್ಣ ಕಾಡು ಹಂದಿನೋ, ಕರಡಿನೋ, ಆಗಿ ಹುಟ್ಟಬೇಕಾಗಿತ್ತು, ತಪ್ಪಿ ಮನುಷ್ಯ ಆಗಿ ಹುಟ್ಟಿದ್ದಾನೆ” (ನಾಗಮಂಡಲ ನಾಟಕದ ಕಪ್ಪಣ್ಣನ ಮಾತುಗಳು)

ಜವಳಿ : “ನಾನಿರದೆ ನೀನಿಲ್ಲ ಹೌದೆ?
ಇಲ್ಲವೆ! ನೀನಿರದೆ ನಾನಿಲ್ಲ ಹೌದೆ?
ಅವಳಿ : ಇರಬಹುದು ಇಬ್ಬರು ಬೇರೆ
ಆದರೂ ಒಳಗಿಳಿದ ಮರದ ಬೇರೊಂದೆ (ಸಿರಿಸಂಪಿಗೆ ನಾಟಕದ ಸಂಭಾಷಣೆ)
ಈ ಸಂಭಾಷಣಾ ಸಾಲುಗಳು ಲೇಖಕನ ಮನಸ್ಸಿನಲ್ಲಿರುವ ತುಡಿತವನ್ನು ಈ ರೀತಿಯಾಗಿ ಆಗಾಗ್ಗೆ ಹೊರಹಾಕುತ್ತವೆ.

ಕುರುಡವ್ವ ಮತ್ತು ಮಾಯಾವತಿ ಸಂಬಂಧಗಳನ್ನು ಬೆಸೆಯುವ, ಗೊಂದಲಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕಾಳಜಿ ವಹಿಸಿದರೆ ಅದಕ್ಕೆ ಸಾಧನವಾಗಿ ಜವಳಿ, ಅವಳಿ, ಕಪ್ಪಣ್ಣ ಕಂಡುಬರುತ್ತಾರೆ. ಈ ಎರಡೂ ನಾಟಕಗಳಲ್ಲಿ ಸ್ತ್ರೀ ಪಾತ್ರಗಳು ಬದುಕಿನದ್ವಂದ್ವ ಸ್ಥಿತಿಯನ್ನು ಎದುರಿಸುತ್ತವೆ. ದಿವ್ಯವನ್ನು ಹಿಡಿಯುವ ಪರಿಕಲ್ಪನೆಯು ಈಎರಡೂ ನಾಟಕಗಳಲ್ಲಿ ಚಿತ್ರಣಗೊಂಡಿದ್ದು, ಕೊನೆಗೆ ಸ್ತ್ರೀ ಪಾತ್ರಗಳ ಪಾತಿವ್ರತ್ಯದ ಗೆಲುವು ಸಾಬೀತಾದರೂ ಸಹ ನಾಯಕ ಪಾತ್ರಗಳನ್ನು ದುಷ್ಟರನ್ನಾಗಿಸಲಾಗಿದೆ. ಆದರೆ ವಸ್ತುನಿಷ್ಠವಾಗಿ ಗಮನಿಸಿದರೆ ವಾಸ್ತವವಾಗಿ ಈ ವಿಚಾರದಲ್ಲಿ ನಾಯಕ ಪಾತ್ರಗಳು ಬಲಿಪಶುಗಳಾಗಿವೆ. ಹೊರನೋಟಕ್ಕೆ

ಕಾಣುವಯಾವ ಪಾತ್ರಗಳೂ ಸಹ ಇಲ್ಲಿ ಮುಖ್ಯವಲ್ಲ. ಅವರ ವರ್ತನೆಗಳಿಗೆ ಪೂರಕವಾಗಿ ಮಿಡಿಯುವ ಮನಸ್ಸು ಮಾತ್ರ ಇಲ್ಲಿ ಮುಖ್ಯವಾಗುತ್ತದೆ. ಮನೋವಿಕಲತೆಯಿಂದ ಬದುಕನ್ನು ಮುರಿದು ಕಟ್ಟುವ ದುಃಸ್ಸಾಹಸಕ್ಕೆ ಕೈ ಹಾಕುವ ಮನಸ್ಸುಗಳನ್ನು ಈ ನಾಟಕಗಳು ಎಚ್ಚರಿಸುತ್ತವೆ. ಇಲ್ಲಿನ ಜನಪದರ ನಂಬಿಕೆಗಳು, ಸಂಪ್ರದಾಯದ ಬೇರುಗಳು ಭವಿಷ್ಯದ ಸೌಧಕ್ಕೆ ಭದ್ರ ಬುನಾದಿ ಎಂಬುದನ್ನು ಲೇಖಕರು ಹೇಳುತ್ತಾರೆ.

ಭ್ರಮಾತ್ಮಕವಾದ ಕಲ್ಪನೆಗಳು ಈ ಎರಡೂ ನಾಟಕಗಳಲ್ಲಿ ಕಂಡು ಬಂದು ನವ್ಯದ ಧೋರಣೆಯನ್ನು ಬಿಂಬಿಸುತ್ತವೆ. ಅತ್ಯಂತ ಮಾರ್ಮಿಕವಾಗಿ ಬದುಕಿನ ಕಹಿಸತ್ಯಗಳನ್ನು ಈ ಇಬ್ಬರೂ ಲೇಖಕರು ತೆರೆದಿಡುತ್ತಾರೆ. "ಸಿರಿಸಂಪಿಗೆ" ಎಂಬ ಶೀರ್ಷಿಕೆಯನ್ನು ಗಮನಿಸುವುದಾದರೆ ಕಂಬಾರರ ಪ್ರಕಾರ ಪರಿಪೂರ್ಣತೆಯು ಮಾಯಾಜಿಂಕೆಯಂತೆ ಕೈಗೆ ಸಿಗದ ಸಿರಿಯಾಗಿ ಕಂಡುಬರುತ್ತದೆ. "ನಾಗಮಂಡಲ" ಎಂಬ ಶೀರ್ಷಿಕೆಯನ್ನು ಗಮನಿಸಿದರೆ ಕಾರ್ನಾಡರು ಬದುಕೆಂಬುದು ಹಲವು ಪರೀಕ್ಷೆಗಳ ಮಾಯಾಜಾಲ. ಅದನ್ನು ಅರ್ಥೈಸಿಕೊಂಡು ಮುಂದೆ ಸಾಗುವುದು ಒಂದು ಸಾಹಸ ಎನ್ನುತ್ತಾ ಮನುಷ್ಯ ಬದುಕಿನ ವೈಚಿತ್ರ್ಯಗಳ ಬಗೆಗೆ ಜಾಗೃತಿ ಮೂಡಿಸುವ ವಿಶೇಷ ಆಸಕ್ತಿ ತೋರುತ್ತಾರೆ. ಒಟ್ಟಾರೆ ಮನಸ್ಸು ಮತ್ತು ಹೆಣ್ಣು ಈ ಎರಡೂ ಪರಿಕಲ್ಪನೆಗಳ ಮೂಲವೂ ಸಾಮಾನ್ಯಜ್ಞಾನಕ್ಕೆ ನಿಲುಕದ ನಿಗೂಢ ಸತ್ಯ. ಹಾಗಾಗಿ ಈ ಎರಡೂ ನಾಟಕಗಳಲ್ಲಿ ದೇಹ–ಮನಸ್ಸು–ಆತ್ಮಗಳ ಚರ್ಚೆಯಲ್ಲಿ ಏಕ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಬದುಕನ್ನು ಅರ್ಥೈಸಿಕೊಳ್ಳುವ ಮೊದಲೇ ಬದುಕನ್ನು ಎದುರಿಸುವ ಸಾಹಸಕ್ಕಿಳಿಯುವ ಯಾರೇ ಆದರೂ ಸಹ ಅಧಃಪತನಕ್ಕೆ ಒಳಗಾಗಬೇಕಾಗುತ್ತದೆಂಬ ಸಾಮಾಜಿಕ ಎಚ್ಚರಿಕೆಯು ಈ ಎರಡೂ ನಾಟಕಗಳಲ್ಲಿ ಕಂಡುಬರುತ್ತದೆ. ಅನುಭವಕ್ಕೆ ಮೌಲ್ಯ, ಸ್ತ್ರೀಗೆ ಸ್ವಾತಂತ್ರ್ಯ, ಅಭಿಪ್ರಾಯಗಳಿಗೆ ಆಸ್ಪದ, ಪ್ರೀತಿಗೆ ಸ್ಪಂದನೆ – ಈ ಸಕರಾತ್ಮಕ ಪ್ರತಿಕ್ರಿಯೆಗಳನ್ನು ರೂಡಿಸಿಕೊಳ್ಳುವ ಮೂಲಕ ನಮ್ಮ ಬದುಕನ್ನು ಹಸನಾಗಿಸಿಕೊಳ್ಳಬಹುದೆಂಬುದು ಈ ಲೇಖಕರ ಅಭಿಪ್ರಾಯವಾಗಿದೆ. ಹಾಗಾಗಿ ಎರಡೂ ನಾಟಕಗಳಲ್ಲಿ ಲೇಖಕನ ಆಲೋಚನಾ ಪ್ರೇರಿತ ತಾತ್ವಿಕ ಸಾಮ್ಯತೆಗಳಿವೆ.

'ಸಿರಿಸಂಪಿಗೆ' ನಾಟಕದಲ್ಲಿ ಬರುವ ಶಿವನಾಗದೇವನೂ ತನ್ನ ನೈಜ ಅಸ್ತಿತ್ವಕ್ಕಾಗಿ ಹಪಾಹಪಿಸುತ್ತಾನೆ. ದೀಪವನ್ನು ಹಿಡಿದ ಸ್ತ್ರೀ ಪ್ರತಿಮೆಯು ಜೀವ ತಳೆದು ಅವನಲ್ಲಿ ಲೀನವಾದ ನಂತರ ಅವಳನ್ನು ಪ್ರೀತಿಸಲಾರಂಭಿಸಿ ಅವಳನ್ನು ಪಡೆಯುವ ಹಂಬಲದಿಂದ ತನ್ನ ದೇಹವನ್ನೇ ಸೀಳಿಕೊಂಡು ಆಕೆಯನ್ನು ಹೊರತೆಗೆಯುವ ಪ್ರಯತ್ನ ಮಾಡುತ್ತಾನೆ. ಆದರೆ ಆ ಪ್ರಯತ್ನದಲ್ಲಿ ಶಿವನಾಗದೇವನು ಸೋಲುತ್ತಾನೆ. ಅನಂತರ ತನ್ನ ತಾಯಿಯ ಒತ್ತಾಯಕ್ಕೆ ಸಿರಿಸಂಪಿಗೆಯನ್ನು ವಿವಾಹವಾದರೂ ಅವನು ಅವಳಲ್ಲಿ ಹುಡುಕುವುದು ದೀಪದ ಮೊಲ್ಲೆಯನ್ನೇ ಎಂಬುದು ವಿಪರ್ಯಾಸ. ಶಿವನಾಗದೇವನು ದೀಪದ ಮೊಲ್ಲೆಯನ್ನು ಹುಡುಕುತ್ತಾ ಸ್ವಮೋಹಿಯಾಗಿ ಬಿಡುತ್ತಾನೆ. ಕೊನೆಗೆ ತನ್ನ ಪ್ರತಿಬಿಂಬವನ್ನೇ ಪ್ರೀತಿಸಲಾರಂಭಿಸುತ್ತಾನೆ. ಹೀಗೆ ಮುಂದುವರಿದು ಕೊನೆಗೆ ದೇವರ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಾನೆ. ದೇವರನ್ನು ಕಾಣಲು ಸರೋವರಕ್ಕೆ ಹೋದಾಗ ಅಲ್ಲಿ ಅವನ ಹೆಣವೇ ತೇಲಿ ಬರುತ್ತದೆ. ಇದೆಲ್ಲವೂ ಮನುಷ್ಯನ ಮಾನಸಿಕ ತುಮುಲಗಳ ಪ್ರತಿಬಿಂಬ ಎನ್ನಬಹುದು. ತಮ್ಮ ತಮ್ಮ ಆಲೋಚನಾ ಲಹರಿಯಂತೆ ಬದುಕನ್ನು ಕಟ್ಟುತ್ತಾ ಸಾಗುತ್ತಾರೆ. ಹೀಗಾಗಿ ಶಿವನಾಗದೇವನು ದ್ವಂದ್ವದಲ್ಲಿ ಸಿಲುಕುತ್ತಾನೆ. ಅವನಿಗೆ ಎಲ್ಲವೂ ಅಸ್ಪಷ್ಟವೆನಿಸುತ್ತದೆ. ಸಿರಿಸಂಪಿಗೆಯ ಬಳಿ ಬಂದು 'ನಾನೀಗ ಬರೀ ಗಾಳಿ ದೇವಿ. ನಿನ್ನ ಚರ್ಮಕ್ಕೆ ಸ್ಪರ್ಶ ಕೂಡ ಮಾಡಲಾರದ ಅಸ್ತಿತ್ವವಿಲ್ಲದೆ ಬರೀ ಮಾತಾಡುವ ಗಾಳಿ' ಎಂದು ಗೋಳಿಡುತ್ತಾನೆ. ಕಾರ್ನಾಡರ ನಾಟಕಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಗಂಡಿನಲ್ಲಿನ ಪರಿಪೂರ್ಣತೆಯನ್ನು ಬಯಸಿ ಸೋತರೆ ಇದಕ್ಕೆ ವಿರುದ್ಧವೆಂಬಂತೆ ಕಂಬಾರರ ಶಿವನಾಗದೇವನು ಹೆಣ್ಣಿನಲ್ಲಿನ ಪರಿಪೂರ್ಣತೆಯನ್ನು ಬಯಸಿ ಸೋಲುತ್ತಾನೆ.

ಇಲ್ಲಿ ಪರಿಪೂರ್ಣಳಾದ ದೀಪದ ಮೊಲ್ಲೆಯನ್ನು ಹುಡುಕುತ್ತಾ, ಸಿರಿಸಂಪಿಗೆಯಲ್ಲಿ ಅವಳನ್ನು ಕಾಣಲಾರದೆ ನಿರಾಕರಿಸಿ, ಕಾಡಿನ ಸರೋವರದಲ್ಲಿ ತನ್ನ ಪ್ರತಿಬಿಂಬವನ್ನೇ ದೀಪದ ಮೊಲ್ಲೆಯೆಂದು ಭ್ರಮಿಸಿ ಆ ಬಿಂಬವನ್ನು ರಮಿಸುತ್ತಾನೆ. ಅಲ್ಲದೆ ಈ ಅನುಭವವನ್ನು ತನ್ನ ಗೆಳೆಯ ಜವಳಿಯಲ್ಲಿ ಹಂಚಿಕೊಳ್ಳುತ್ತಾ "ನಮ್ಮಿಬ್ಬರಲ್ಲಿ ಎಷ್ಟು ಸಾಮರಸ್ಯ ಇತ್ತು ಎಂದರೆ ನಾವಿಬ್ಬರೂ ಎರಡರ್ಧ ಸೇರಿ ಒಂದಾಗಿದ್ದೆವು ಬರಬರುತ್ತಾ ನಾವಿಬ್ಬರೂ ಸೇರಿ ಅಖಂಡವಾದ ಸೊನ್ನೆಯಾಗಿ ನಿರಾಕಾರ ಶಿವಲಿಂಗವಾಗಿ ದೇವರಾಗಿದ್ದೆವು." ಎನ್ನುತ್ತಾನೆ. ಈ ಭ್ರಮೆಯಲ್ಲಿಯೇ ಮುಂದುವರೆಯುವ ಆತ ಕೊನೆಗೆ ಸಂಪಿಗೆಯಲ್ಲಿ ತನಗೆ ಒಂದು ದೇಹಕೊಡು, ನನ್ನನ್ನ ಪರಿಪೂರ್ಣವಾಗಿಸು ಎಂದು ಬೇಡಿಕೊಳ್ಳುತ್ತಾನೆ. ಹೀಗೆ ತನ್ನ ದೇಹವನ್ನೇ ಸೀಳಿಕೊಂಡು ಎರಡಾಗುವ ಆತ ತನ್ನ ದೇಹಾರ್ಧವಾದ ಕಾಳಿಂಗನನ್ನು ಗುರುತಿಸುವಲ್ಲಿ ವಿಫಲವಾಗುತ್ತಾನೆ. ತನ್ನನ್ನು ತಾನೇ ಸೀಳಿಕೊಳ್ಳುವ ಆತನು ಪರಿಪೂರ್ಣತ್ವ ಪಡೆಯುವುದು ಸಾವಿನಲ್ಲಿಯೇ ಎನ್ನಬಹುದು. ಯಾವುದೇ ಕೊರತೆಯಿಲ್ಲದ ಸ್ತ್ರೀಗಾಗಿ ಹಾತೊರೆಯುವಂತಹ ಶಿವನಾಗದೇವನು ತನ್ನ ದೇಹವನ್ನೇ ಸೀಳಿಕೊಂಡು ದೇಹ–ಆತ್ಮಗಳು ಬೇರ್ಪಟ್ಟು ತನ್ನ ಪ್ರಯತ್ನದಲ್ಲಿ ಸೋತು ಕೊನೆಗೆ ಸಂಪಿಗೆಗೆ 'ನಮ್ಮ ಮಗ ಸೀಳಿಕೊಳ್ಳದ ಹಾಗೆ ನೋಡಿಕೋ' ಎಂದು ಎಚ್ಚರಿಕೆಯನ್ನು ಕೊಡುತ್ತಾನೆ. ಶಿವನಾಗದೇವನಂತೆ ಕಾಳಿಂಗನೂ ಸಹ ನೈಜ ಅಸ್ತಿತ್ವಕ್ಕಾಗಿ ಹಂಬಲಿಸುವ ಪಾತ್ರವಾಗಿದೆ. ಈತನು ಸಂಪಿಗೆಯ ಜೊತೆಯಲ್ಲಿ ರಮಿಸಿದರೂ ಆತನು ಪೂರ್ಣಸುಖ ಕಾಣಲು ಸಾಧ್ಯವಾಗುವುದಿಲ್ಲ. "ಕೇಳು ಸಂಪಿಗೆ ಇಷ್ಟು ದಿವಸ ನಿನ್ನ ಜೊತೆಗೆ ಹ್ಯಾಗಿದ್ದೇನೆ ಅಂತ ಆಶ್ಚರ್ಯವಾಗುತ್ತಿದೆ. ನಿನ್ನ ಆಚೆಗಿನ ಯಾವುದೋ ನೆರಳನ್ನು ನಾನು ಬಯಸುತ್ತಿದ್ದೆ ಅಥವಾ ಅದನ್ನು ನೋಯಿಸಿದ್ದೇನೆ ಅಂತ ಅನ್ನಿಸುತ್ತಿದೆ... ಈಗ ನೆರಳನ್ನು ಬಿಟ್ಟು ಬೇರೇನೂ ಕಾಣುವುದಿಲ್ಲ. ನಮ್ಮಿಬ್ಬರಲ್ಲಿ ಈ ನೆರಳು ನಿಜವೆನಿಸುತ್ತದೆ." ಎಂದು ಅವನೇ ಸಂಪಿಗೆಯ ಬಳಿ ತನ್ನ ಅಪೂರ್ಣತೆಯ ಗೊಂದಲವನ್ನು ತೋಡಿಕೊಳ್ಳುತ್ತಾನೆ. ಶಿವನಾಗದೇವನು ದೇಹಕ್ಕಾಗಿ ಹಂಬಲಿಸಿದರೆ, ಕಾಳಿಂಗನು ಮನಸ್ಸಿಗಾಗಿ ಹಂಬಲಿಸುತ್ತಾನೆ. ಇಲ್ಲಿ ದೇಹ–ಮನಸ್ಸುಗಳ ತಾಕಲಾಟವನ್ನು ಈ ನಾಟಕದ ವಸ್ತು ಧ್ವನಿಸುತ್ತದೆ. 'ಸಿರಿಸಂಪಿಗೆ' ನಾಟಕದ ಆರಂಭದಲ್ಲಿಯೇ ಬರುವ ಪ್ರಾರ್ಥನೆ–

**ಸೊಲ್ಲೀನ ಮೊದಲೀಗೆ ಸಾವಿರ ಶರಣೆಂಬೆ**
**ಸಾವಳಗಿ ಶಿವನಿಂಗ ಮಹಾಸ್ವಾಮಿಗೆ।**
**ಲೀಲೆಯಲಿ ಹೋಳಾಗಿ ಸತಿಪತಿತಾನಾಗಿ**
**ನಟಿಸಿದ ನಟರಾಜ ಅರ್ಧನಾರೀಶ್ವರಗೆ।**
**ಮೈಯೆಂದು ಮನಸೆಂದು ಆತ್ಮದೇಹಗಳೆಂದು**
**ಎರಡಾಗಿ ಒಡೆದವಗೆ ಎರಡಳಿದ ಶಿವಗೆ॥**

ಈ ಮೇಲಿನ ಸಾಲುಗಳಲ್ಲಿ ಸತಿಪತಿಯೇ ತಾನಾಗುವ ಬಯಕೆಯು ಅರ್ಧನಾರೀಶ್ವರ ರೂಪದ ಪ್ರೇರಣೆಯೇ ಆಗಿರಬಹುದು. ಮೈಯನ್ನು ದೇಹವೆಂದೂ, ಮನಸ್ಸನ್ನು ಆತ್ಮವೆಂದೂ ಕಾಣುವ ಮನಃಸ್ಥಿತಿಯು ಈ ಬಗೆಯ ಲೀಲೆಗೆ ಕಾರಣವಾಗುತ್ತದೆ. ಮನುಷ್ಯನು ತನ್ನೊಳಗಿನ ಅಸ್ತಿತ್ವದ ಹುಡುಕಾಟಕ್ಕಾಗಿ ಪರಿಪೂರ್ಣತೆಯ ನೆಪದಲ್ಲಿ ಹೊಸ ಲೋಕವೊಂದನ್ನು ಪ್ರವೇಶಿಸಲು ಬಯಸುತ್ತಾನೆ. ಇದುಆತನ ಸಂಕೀರ್ಣತೆಯ ಬದುಕನ್ನು ಓದುಗನಿಗೆ ಕಟ್ಟಿಕೊಡುತ್ತದೆ.

ಈ ಎರಡೂ ನಾಟಕಗಳಲ್ಲಿ ಬರುವ ಪಾತ್ರಗಳು ತಮ್ಮ ಅಸ್ತಿತ್ವದ ಹುಡುಕಾಟದಲ್ಲಿಯೇ ತೊಳಲಾಡುತ್ತವೆ. ಆಧುನಿಕ ಸಮಾಜದಲ್ಲಿಯೂ ಸಂಕೀರ್ಣವಾದ ಯಾಂತ್ರಿಕ ಬದುಕಿಗೆ ಸಿಲುಕಿದ ಮನುಷ್ಯ ತನ್ನ ವೈಯಕ್ತಿಕ, ಸಾಮಾಜಿಕ ಹಾಗು ಕೌಟುಂಬಿಕವಾದ ಇಂತಹ ಹಲವು ಅಪೂರ್ಣತೆಗಳಿಂದ ಪ್ರತಿಕ್ಷಣವೂ ಪರಿತಪಿಸುತ್ತಿದ್ದಾನೆ. ಹಾಗಾಗಿ ಇಂತಹ ಮನಸ್ಸುಗಳಿಗೆ ಪರಿಪೂರ್ಣತೆ ಎಂಬುದು ಸಾಧಿತವಾಗದ ಗುರಿಯಾಗಿದೆ. ಅದರ ಹುಡುಕಾಟದಲ್ಲಿಯೇ ತಮ್ಮ ಇಡೀ ಜೀವನವನ್ನು ಮನುಷ್ಯನು ಕಳೆಯುತ್ತಾನೆ. ಈ ನಾಟಕಗಳು ಮನುಷ್ಯನ ಆಲೋಚನೆಗಳ ಮಿತಿಯನ್ನು ಪರಿಚಯಿಸುವುದರೊಂದಿಗೆ ವಾಸ್ತವತೆಯನ್ನು ತೆರೆದಿಡುತ್ತವೆ.

---

**ಪರಾಮರ್ಶಿಸಿದ ಕೃತಿಗಳು :**

೧. ಸಿರಿಸಂಪಿಗೆ : ಚಂದ್ರಶೇಖರ ಕಂಬಾರ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೭.
೨. ನಾಗಮಂಡಲ : ಗಿರೀಶ ಕಾರ್ನಾಡ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೦೯.
೩. ಆಧುನಿಕ ಕನ್ನಡ ನಾಟಕ : ಡಾ. ಕೆ.ಮರುಳಸಿದ್ದಪ್ಪ, ಅಂಕಿತ ಪುಸ್ತಕ, ಬೆಂಗಳೂರು, ೨೦೦೯.
೪. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್. ಶೇಷಗಿರಿರಾವ್, ಅಂಕಿತ ಪುಸ್ತಕ, ಬೆಂಗಳೂರು, ೨೦೦೬.